**ದಿನಾಂಕ 14.03.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ನಾನು 4 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ತಾವರೆಕೆರೆ ಗ್ರಾಮ ಪಂಚಾಯತಿಯ ಸದಸ್ಯರಾಗಿ ನಾನು 2 ಬಾರಿ ಆಯ್ಕೆಯಾಗಿದ್ದೇನೆ. 2002-03 ರಲ್ಲಿ ಸದಸ್ಯನಾಗಿದ್ದೆನು. ಸುಮಾರು 40 ವರ್ಷಗಳ ಹಿಂದೆ ನಾನು ಪಂಚಾಯತಿಯ ಮೆಂಬರ್ ಆಗಿದ್ದೆನು. ತಾವರೆಕೆರೆ ಒಡ್ಡರಹಟ್ಟಿ ನಮ್ಮ ಪಂಚಾಯತಿಯ ಲಿಮಿಟ್ ನಲ್ಲಿ ಬರುತ್ತದೆ ಎಂದರೆ ಸರಿ. ನಾನು ಹುಟ್ಟಿದ ದಿನಾಂಕ 01.05.1949. ನಾನು ಮತ್ತು ಪಿ.ಡಬ್ಲ್ಯೂ.3 ರವರು ಸಮಕಾಲೀನರು ಎಂದರೆ ಸಾಕ್ಷಿಯು 1-2 ವರ್ಷಗಳು ಹೆಚ್ಚು ಕಮ್ಮಿ ಇದೆ ಎಂದು ನುಡಿಯುತ್ತಾರೆ.
2. ವಾದಿ ರವರ ಮಗ ಪಿ.ಹನುಮಂತಯ್ಯ @ ಹನುಮಂತಪ್ಪ ಇವರು ಮೊದಲಿಂದಲೂ ನನಗೆ ಚೆನ್ನಾಗಿ ಗೊತ್ತಿದ್ದಾಗೆ ಎಂದರೆ ಸರಿ, ಹಾಗೆ ಬಹಳ ವಿಶ್ವಾಸದಲ್ಲಿ ಇದ್ದೇವೆ ಎಂದರೆ ಸರಿ. 2 ನೇ ವಾದಿ ಹನುಮಂತಪ್ಪನಿಗೂ ಮತ್ತು ನನಗೂ 2-3 ವರ್ಷಗಳು ವಯಸ್ಸಿನಲ್ಲಿ ಅಂತರವಿದೆ. ವಾದಿಯ ತಂದೆ ಮತ್ತು ಅವರ ಅಕ್ಕ-ತಂಗಿ, ಅಣ್ಣ-ತಮ್ಮಂದಿರು ನನಗೆ ಪರಿಚಯವಿದ್ದಾರೆ. ವಾದಿಯ ತಂದೆಯ ಹೆಸರು ಮೂಡ್ಲಪ್ಪ. ನನಗೆ ಗೊತ್ತಿರುವ ಪ್ರಕಾರ ಮೂಡ್ಲಪ್ಪನಿಗೆ ಒಟ್ಟು 3 ಜನ ಮಕ್ಕಳು, ಅವರುಗಳಲ್ಲಿ ವಾದಿ ಒಬ್ಬರು ಮತ್ತು ಇಬ್ಬರು ತಮ್ಮಂದಿರು. ಇಬ್ಬರು ತಮ್ಮಂದಿರ ಹೆಸರು ತಿಮ್ಮಾಭೋವಿ ಮತ್ತು ಮೂಡ್ಲಾಭೋವಿ. ಇಬ್ಬರೂ ಸಹ ಜೀವಂತವಾಗಿದ್ದಾರೆ. ಸದರಿಯವರು ಆರೋಗ್ಯವಾಗಿ ಚೆನ್ನಾಗಿ ವ್ಯವಸಾಯವನ್ನು ಮಾಡಿಕೊಂಡು ಇದ್ದಾರೆ ಎಂದರೆ ಸರಿ.
3. ವಾದಿಯ ತಂದೆ ಮೂಡ್ಲಪ್ಪನ ಅಣ್ಣ-ತಮ್ಮಂದಿರು ಹಾಗೂ ಅಕ್ಕ-ತಂಗಿಯರ ಬಗ್ಗೆ ನನಗೆ ಗೊತ್ತಿಲ್ಲ. ಒಡ್ಡರಹಟ್ಟಿಗೆ ತಾವರಕೆಗೆಯಿಂದ ಸುಮಾರು 3 ಕಿ.ಮೀ. ಅಂತರವಿದೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳ ತಂದೆ ಲೇ.ಪ್ರಸನ್ನಕುಮಾರ್ ರವರ ಜಮೀನು ಒಡ್ಡರಹಟ್ಟಿಯ ಪಕ್ಕದಲ್ಲಿ ಎರಡು ಜಮೀನುಗಳು ಇವೆ ಎಂದರೆ ಸಾಕ್ಷಿಯು ಒಂದು ಜಮೀನು

ಒಡ್ಡರಹಟ್ಟಿಯಲ್ಲಿ ಇದೆ ಇನ್ನೊಂದು ಜಮೀನು ಅಲ್ಲಿಂದ 1 ಕಿ.ಮೀ. ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ಪ್ರಸನ್ನಕುಮಾರ್ ರವರ ವ್ಯವಸಾಯ ಜಮೀನಿನಲ್ಲಿ ತಾವರೆಕೆರೆ ಒಡ್ಡರಹಟ್ಟಿಯಿಂದ ಕೂಲಿ ಆಳುಗಳು ಹೋಗುತ್ತಾರೆ ಎಂದರೆ ಸರಿ. ಪ್ರಸನ್ನಕುಮಾರ್ ರವರಿಗೆ ಸಂಬಂಧಪಟ್ಟ ಸ್ವತ್ತುಗಳು ಶಿರಾದಲ್ಲಿ ಇವೆ ಎಂದರೆ ಸಾಕ್ಷಿಯು ಅಂಗಡಿ ಇರುವ ವಿಚಾರ ಗೊತ್ತಿದೆ, ಬೇರೆ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಪ್ರಸನ್ನಕುಮಾರ್ ರವರ ಮಕ್ಕಳು ಮಂಜುನಾಥ, ಆಂಜನೇಯ ಮೂರ್ತಿ, ಮತ್ತು ಅಮರೇಶ್ ಇವರು ಪರಿಚಯವಿಲ್ಲ ಆದರೆ ಅವರುಗಳನ್ನು ನೋಡಿದ್ದೇನೆ. ಪ್ರಸನ್ನಕುಮಾರ್ ರವರ ಹೆಂಡತಿ ಕೃಷ್ಣವೇಣಿ ಎಂದರೆ ಸರಿ, ಅವರನ್ನು ನಾನು ನೋಡಿದ್ದೇನೆ. ಕೃಷ್ಣವೇಣಿಯವರು ಮೃತಪಟ್ಟಿರುವ ವಿಚಾರ ನನಗೆ ಗೊತ್ತಿದೆ. ಕೃಷ್ಣವೇಣಿ ಮತ್ತು ಪ್ರಸನ್ನಕುಮಾರ್ ರವರಿಗೆ ಮದುವೆಯಾಗಿರುವ ವಿಷಯ ನನಗೆ ಗೊತ್ತಿದೆ ಎಂದರೆ ನಾನು ನೋಡಿಲ್ಲ, ಆದರೆ ಮದುವೆಯಾಗಿದ್ದಾರೆ ಎಂದು ಹೇಳಿರುವುದನ್ನು ನಾನು ಕೇಳಿದ್ದೇನೆ. ಕೃಷ್ಣವೇಣಿ ಮತ್ತು ಪ್ರಸನ್ನಕುಮಾರ್ ರವರಿಗೆ ಮಂಜುನಾಥ, ಆಂಜನೇಯ ಮೂರ್ತಿ, ಮತ್ತು ಅಮರೇಶ್ ಈ ಮೂರು ಜನ ಮಕ್ಕಳು ಎಂದರೆ ಸರಿ. ಸದರಿ ಮೂರು ಜನ ಮಕ್ಕಳು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿರುವ ವಿಚಾರ ನನಗೆ ಗೊತ್ತಿದೆ.

5. ನಾನು 1977 ರಲ್ಲಿ ಮದುವೆಯಾಗಿರಬಹುದು ನನಗೆ ನೆನಪಿಲ್ಲ. ನಾನು ಮದುವೆಯಾಗುವ ಸಮಯದಲ್ಲಿ ಲಗ್ನ ಪತ್ರಿಕೆಯನ್ನು ಪ್ರಿಂಟ್ ಮಾಡಿಸಲಾಗಿತ್ತು. ಸದರಿ ಮದುವೆ ಶಾಸ್ತ್ರ ಸಾಂಪ್ರದಾಯಗಳಿಂದ ನಡೆದಿದೆ ಎಂದರೆ ಸರಿ. ನಮ್ಮ ಮದುವೆಯ ಸಮಯದಲ್ಲಿ ಛಾಯಾ ಚಿತ್ರಗಳು ಇರಲಿಲ್ಲ. ಪ್ರಸನ್ನ ಕುಮಾರ್ ನನಗಿಂತ ಬಹಳ ದೊಡ್ಡವನು ಎಂದರೆ ಸರಿ. ನಮ್ಮ ಊರಿನಲ್ಲಿ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ ಇದೆ ಎಂದರೆ ಸರಿ, ಸದರಿ ದೇವಸ್ಥಾನವನ್ನು ಬಂಡಿ ರಂಗನಾಥ ಸ್ವಾಮಿ ದೇವಸ್ಥಾನ ಎಂದು ಕರೆಯುತ್ತಾರೆ ಎಂದರೆ ಸರಿ. ನಮ್ಮ ಊರಿನಿಂದ 3-4 ಕಿ.ಮೀ ಅಂತರದಲ್ಲಿ ಗುಡ್ಡದ ಮೇಲೆ ಮರಡಿ ರಂಗನಾಥ ಸ್ವಾಮಿ ದೇವಸ್ಥಾನವಿದೆ ಎಂದರೆ ಸರಿ. ಬಂಡಿ ರಂಗನಾಥ ಸ್ವಾಮಿ ದೇವಸ್ಥಾನ ಬಹಳಷ್ಟು ವರ್ಷಗಳಿಂದ

ಇದ್ದು ಅದು ಸರ್ಕಾರಕ್ಕೆ ಸೇರಿದೆ ಎಂದರೆ ಸರಿ. ಸದರಿ ದೇವಸ್ಥಾನದಲ್ಲಿ ಯಾವುದೇ ಶುಭಕಾರ್ಯಗಳ ಸಂದರ್ಭದಲ್ಲಿ ಅನುಮತಿಯನ್ನು ಸರ್ಕಾರದಿಂದ ತೆಗೆದುಕೊಳ್ಳಬೇಕು ಎಂದರೆ ಸಾಕ್ಷಿಯು ಮದುವೆ ಮಾಡಿಕೊಳ್ಳಬೇಕಾದಲ್ಲಿ ತಹಶೀಲ್ದಾರವರಿಂದ ಅನುಮತಿಯನ್ನು ಪಡೆಯಬೇಕು, ಆದರೆ ಸುಮ್ಮನೆ ಹೋಗಿ ತಾಳಿ ಕಟ್ಟಿಕೊಂಡಲ್ಲಿ ಆ ರೀತಿ ಯಾವುದೇ ಅನುಮತಿ ಬೇಕಾಗುವುದಿಲ್ಲ ಎಂದು ನುಡಿಯುತ್ತಾರೆ.

6. 2 ನೇ ವಾದಿ ಹನುಮಂತಪ್ಪ ನವರು ಒಡ್ಡರಹಟ್ಟಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ವಾದಿಯ ಮಗ ಹನುಮಂತಪ್ಪ ಹುಟ್ಟಿದ ನಂತರ ಅವರು ತಾವರೆಕೆರೆಯಲ್ಲಿ ಲಿಂಗಾಯತರ ಮನೆಯಲ್ಲಿ ಇದ್ದರು, ನಂತರ ಶಿರಾಗೆ ಬಂದಿರುತ್ತಾರೆ. 2 ನೇ ವಾದಿಯು ಹುಟ್ಟಿರುವ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ದೊಡ್ಡಬಸಯ್ಯ ಎಂಬ ಲಿಂಗಾಯತರ ಮನೆಯಲ್ಲಿ 1 ನೇ ವಾದಿಯವರು ಇದ್ದರು. ಅವರ ಮಕ್ಕಳು ಈಗ ಇದ್ದಾರೆ. ವಾದಿಯವರ ಮನೆಗೆ ನಾನು ಹೋಗಿಲ್ಲ ನಾನು ನಾಯಕರಹಟ್ಟಿಯಲ್ಲಿ ವಾಸವಿದ್ದಾಗ ಗಂಡ ಹೆಂಡತಿ ಬಂದು ಹೋಗಿ ಮಾಡುವುದನ್ನು ನಾನು ನೋಡಿದ್ದೇನೆ. ನಾನು ಆ ಸಮಯದಲ್ಲಿ ನೀರುಗಂಟಿ (ಹೊಲಕ್ಕೆ ನೀರು ಬಿಡುವ ಕೆಲಸ) ಕೆಲಸವನ್ನು ಮಾಡುತ್ತಿದ್ದೆನು.

7. ನಾನು ನೀರುಗಂಟಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ಅದು ಸರ್ಕಾರಿ ಕೆಲಸವಲ್ಲ, ರೈತರು ನೇಮಕ ಮಾಡಿರುತ್ತಾರೆ. 2 ನೇ ವಾದಿಯು 10 ನೇ ತರಗತಿಯವರೆಗೂ ವಿದ್ಯಾಭ್ಯಾಸವನ್ನು ತಾವರೆಕೆರೆಯಲ್ಲಿ ಅಥವಾ ಶಿರಾದಲ್ಲಿ ಮಾಡಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ ವಾದಿಯು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಾವರೆಕೆರೆ ಯಲ್ಲಿ ದಿನಾಂಕ 01.06.1969-70 ರಲ್ಲಿ ವ್ಯಾಸಾಂಗ ಮಾಡಿದ್ದಾರೆ ಎಂದರೆ, ಸಾಕ್ಷಿಯು ಮಾಡಿರಬಹುದು ನನಗೆ ಗೊತ್ತಿರುವುದನ್ನು ಹೇಳುತ್ತಿದ್ದೇನೆ, ಎಲ್ಲವನ್ನೂ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. 2 ನೇ ವಾದಿಯ ತಂದೆಯ ಹೆಸರು ತಿಮ್ಮಾಭೋವಿ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ತಿಮ್ಮಾಭೋವಿ ಅವರ ಮಾವನಾಗಿದ್ದು, ಓಟರ್ ಲಿಸ್ಟ್ ನಲ್ಲಿ ಆ ರೀತಿ ಗೊತ್ತಿಲ್ಲದೇ ಬರೆಸಿರಬಹುದು, ಅವರ ಮನೆಯಲ್ಲಿಯೇ 2 ನೇ ವಾದಿಯನ್ನು ಓದಲು ಬಿಟ್ಟಿದ್ದರು.

8. 2 ನೇ ವಾದಿಯ ಮಾವ ತಿಮ್ಮಾಭೋವಿಯ ತಂದೆಯ ಹೆಸರು ಮೂಡ್ಲಾಭೋವಿ. 2 ನೇ ವಾದಿಯು 10 ನೇ ತರಗತಿಯನ್ನು ಮುಗಿಸಿದ ನಂತರ ಶಿರಾದ ಪ್ರಥಮ ದರ್ಜೆಯ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಸಂಬಂಧಿಸಿದಂತೆ ಆಧಾರ್ ಕಾರ್ಡ್, ಎಲೆಕ್ಷನ್ ಕಾರ್ಡ್ ಗಳನ್ನು ನಾನು ನೋಡಿದ್ದೇನೆ. ಸದರಿ ಎಲೆಕ್ಷನ್ ಮತ್ತು ಆಧಾರ್ ಕಾರ್ಡ್ ನಲ್ಲಿ ತಿಮ್ಮಾಭೋವಿ ತಂದೆ ಎಂದು ತೋರಿಸಲಾಗಿದೆ ಎಂದರೆ ಆತ ಮಾವನಾಗಬೇಕು ಎಂದು ನುಡಿಯುತ್ತಾರೆ, ಆದರೆ ಎಲೆಕ್ಷನ್ ಕಾರ್ಡ್ ನಲ್ಲಿ ಸರಿಯಾಗಿ ಹೇಳದ ಕಾರಣ ತಿಮ್ಮಾಭೋವಿಯವರು 2 ನೇ ವಾದಿಯ ತಂದೆ ಎಂದು ಬರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ವಾದಿಯ ತಂದೆಯ ಹೆಸರನ್ನು ಯಾವಾಗ ಬದಲಾವಣೆ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. 2 ನೇ ವಾದಿಯು ವ್ಯಾಪಾರ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿದ್ದಾರೆ ಎಂದರೆ ಸರಿ. 2 ನೇ ವಾದಿಯವರು ಅವರ ಜನಾಂಗದಲ್ಲೇ ಮದುವೆಯಾಗಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಮಕ್ಕಳು ಇರುವ ವಿಚಾರ ನನಗೆ ತಿಳಿದಿದೆ, 2 ಗಂಡು ಮಕ್ಕಳು ಇದ್ದಾರೆ.

9. 2 ನೇ ವಾದಿಗೆ ಸಂಬಂಧಪಟ್ಟ ದಾಖಲಾತಿಗಳಲ್ಲಿ ಒಡ್ಡರ ಜನಾಂಗಕ್ಕೆ ಸೇರಿದವರು ಎಂದು ಇದೆ ಎಂದರೆ ಸಾಕ್ಷಿಯು ಅವರು ಏನೆಲ್ಲಾ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ವಾದಿಯು ನನಗೆ ಪರಿಚಯವಿದ್ದಾರೆ ಎಂದರೆ ಸಾಕ್ಷಿಯು ನಾನು 2003 ರಲ್ಲಿ ಗ್ರಾಮಪಂಚಾಯತಿಯ ಸದಸ್ಯನಾಗಿರುವ ಕಾರಣ ಪರಿಚಯವಿದ್ದಾರೆ ಹಾಗೂ ಸುಮಾರು 10-12 ಸಾವಿರ ಜನರ ಪರಿಚಯವಿದೆ ಎಂದು ನುಡಿಯುತ್ತಾರೆ. 2 ನೇ ವಾದಿಯೇ ನನ್ನನ್ನು ಸಾಕ್ಷಿ ನುಡಿಯುವಂತೆ ನ್ಯಾಯಾಲಯಕ್ಕೆ ಕರೆತಂದಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವ ವಿಚಾರ ಹೇಳುತ್ತೇನೆ ಎಂದು ಹೇಳಿದ್ದು ಗೊತ್ತಿರುವ ವಿಚಾರವನ್ನು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

10. ಪ್ರಸ್ತುತ ದಾವೆಯನ್ನು ಯಾರು ಯಾರ ಮೇಲೆ ಏತಕ್ಕಾಗಿ ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾದಿ ಹನುಮಕ್ಕನವರು ಅವರಿಗೆ ಭಾಗ ಬರಬೇಕೆಂದು ತಾವರೆಕೆರೆ

ಜಮೀನು ಅವರಿಗೆ ಬರಬೇಕೆಂದು ದಾವೆಯನ್ನು ಹೂಡಿರುತ್ತಾರೆ. ದಾವೆಯನ್ನು ಹನುಮಕ್ಕನವರು ಆಂಜನಿ, ಮಂಜು ರವರ ವಿರುದ್ಧ ಹೂಡಿದ್ದಾರೆ. ಎಷ್ಟು ಸ್ವತ್ತುಗಳ ವೇಲೆ ದಾವೆಯನ್ನು ಹೂಡಿದ್ದಾರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ನೋಡಿದ್ದೇನೆ ಎಂದು ಬರೆದಿದ್ದೀರಾ ಎಂದರೆ ಸಾಕ್ಷಿಯು ನೋಡಿರುವುದನ್ನು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳ ವಿಸ್ತೀರ್ಣ ಮತ್ತು ಸರ್ವೆ ನಂಬರ್ ನನಗೆ ನೆನಪಿಲ್ಲ, ಆದರೆ ಚಕ್ಕು ಬಂದಿ ಹೇಳುತ್ತೇನೆ. ಎರಡು ಸ್ವತ್ತುಗಳು ಇದ್ದು, ಅದರ ಚಕ್ಕು ಬಂದಿಗಳನ್ನು ಹೇಳುತ್ತೇನೆ, ಬೇರೆ ಆಸ್ತಿಗಳ ಚಕ್ಕು ಬಂದಿ ನನಗೆ ಗೊತ್ತಿಲ್ಲ.

11. 2 ನೇ ವಾದಿಗೆ ನಮ್ಮ ಪಂಚಾಯತಿಯ ವತಿಯಿಂದ ಒಡ್ಡರಹಟ್ಟಿಯಲ್ಲಿ ಒಂದು ಮನೆ ಮಂಜೂರಾಗಿದೆ ಎಂದರೆ ಸರಿ. 2 ನೇ ವಾದಿಯು ಅದರಲ್ಲಿ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಸರಿ. ಅದೇ ಮನೆಯಲ್ಲಿ 2 ನೇ ವಾದಿ ವಾಸವಾಗಿದ್ದಾರೆ ಎಂದರೆ ಸರಿ. ಅದೇ ರೀತಿ ನಮ್ಮ ಪಂಚಾಯತಿಯ ಕಂದಾಯ ದಾಖಲಾತಿಗಳಲ್ಲಿ ಕೂಡ ನಮೂದಾಗಿದೆ ಎಂದರೆ ಸರಿ. ಕಂದಾಯ ದಾಖಲಾತಿಗಳ ಹಕ್ಕು ಪತ್ರದಲ್ಲಿ ಕೂಡ ಟಿಹನುಮಂತಯ್ಯ ಬಿನ್ ತಿಮ್ಮಯ್ಯ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಆಗಲೇ ಹೇಳಿದಂತೆ ಅವರ ಮಾವನ ಹೆಸರು ತಂದೆಯ ಹೆಸರೆಂದು ದಾಖಲಾಗಿದ್ದು, ಅದು ಮುಂದುವರೆದಿದೆ ಎಂದು ನುಡಿಯುತ್ತಾರೆ. ಪಂಚಾಯತಿ ದಾಖಲಾತಿಗಳಲ್ಲೂ ಸಹ ಅದೇ ರೀತಿ ಇದೆ ಎಂದರೆ ಸರಿ. 2000 ನೇ ಸಾಲಿನ ಹಿಂದೆ 1 ನೇ ವಾದಿಯ ಗಂಡನ ಹೆಸರು ತಿಮ್ಮಾಭೋವಿ ಎಂದು ಎಲೆಕ್ಷನ್ ಕಾರ್ಡ್ ನಲ್ಲಿ ಇದೆ ಎಂದರೆ ಸಾಕ್ಷಿಯು ತಿಮ್ಮಾಭೋವಿ ಆಕೆಯ ತಮ್ಮನಾಗಿದ್ದು, ಅವರು ಎಲೆಕ್ಷನ್ ಕಾರ್ಡ್ ನಲ್ಲಿ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ.

12. ನಾನು ಪ್ರಮಾಣ ಪತ್ರದಲ್ಲಿ ಹೇಳಿದಂತೆ ಮಗು ಹುಟ್ಟಿದ ನಂತರ ಗಂಡ ಹೆಂಡತಿ ಇಬ್ಬರು ತಾವರೆಕೆರೆಗೆ ಬಂದಿದ್ದು, ನಂತರ ಅಲ್ಲಿಂದ ಶಿರಾಗೆ ಹೋಗಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿಗೆ ಮದುವೆಯಾದ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಸುಮಾರು 60 ವರ್ಷಗಳ ಹಿಂದೆ ಮದುವೆಯಾಗಿರಬಹುದು. 60 ವರ್ಷಗಳ ಹಿಂದೆ ಮದುವೆಯಾಗಿರುವ ವಿಚಾರವನ್ನು ನಾನು ಖುದ್ದಾಗಿ ನೋಡಿರುವುದಿಲ್ಲ, ನಾವು ಆ

ಕಾಲದಲ್ಲಿ ಹುಡುಗನಾಗಿದ್ದು ಬಾಗಿಲಿನಲ್ಲಿ ನಿಂತುಕೊಂಡು ಮದುವೆಯ ಕಾರ್ಯವನ್ನು ನೋಡಿದ್ದೇನೆ. 1 ನೇ ವಾದಿಯವರ ಮದುವೆಯ ಸಮಯದಲ್ಲಿ ನನಗೆ ಸುಮಾರು 12 ವರ್ಷಗಳು ಇರಬಹುದು, ನಿಖರವಾಗಿ ಹೇಳಲು ಸಾಧ್ಯವಿಲ್ಲ. ಸದರಿ ಮದುವೆಗೆ ಊರಿನ ಜನರು ಹಾಜರಾಗಿದ್ದರು, ಪುರೋಹಿತರು ಬಂದಿರಲಿಲ್ಲ, ಇಬ್ಬರು ಮೂರು ಜನರ ಹೆಸರು ಗೊತ್ತಿದೆ ಉಳಿದವರ ಹೆಸರು ನನಗೆ ಗೊತ್ತಿಲ್ಲ. ಅಕ್ಕಿ ಕಾಳು ಹಾಕಿ ಮದುವೆ ಮಾಡಿರುತ್ತಾರೆ.

13. ತಾವರೆಕೆರೆಯ ಬಂಡಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಮದುವೆಯಾಗಿರುತ್ತಾರೆ. ಮದುವೆಗೆ ಹಾಜರಾಗಿದ್ದವರು ರಂಗಣ್ಣ, ಮುದ್ದಪ್ಪ ಮತ್ತು ಬೊಮ್ಮಣ್ಣ. ಸದರಿಯವರು ಈಗ ಬದುಕಿಲ್ಲ. ರಂಗಣ್ಣ ಮುದ್ದಪ್ಪ ನವರ ತಂದೆಯ ಹೆಸರು ದಗ್ಗೀರನಾಯ್ಕ, ಬೊಮ್ಮಣ್ಣನವರ ತಾಯಿಯ ಹೆಸರು ಕೆಂಪಕ್ಕ ತಂದೆಯ ಹೆಸರು ಗೊತ್ತಿಲ್ಲ. ಮದುವೆಯ ಸಮಯದಲ್ಲಿ ಯಾರ ಕಡೆ ಎಷ್ಟು ಜನರು ಬಂದಿದ್ದರು ಎಂದು ಹೇಳಲು ಸಾಧ್ಯವಿಲ್ಲ ನನಗೆ ನೆನಪಿರುವುದೆಲ್ಲ ಹೇಳಿದ್ದೇನೆ. ಸುಮಾರು 10-12 ಜನ ಹಾಜರಿರಬಹುದು. ನನ್ನ ಪ್ರಮಾಣ ಪತ್ರದಲ್ಲಿ ಹಿಂದೂ ಸಾಂಪ್ರದಾಯದಂತೆ ಮದುವೆಯಾಗಿದೆ ಎಂದು ಬರೆಸಿದ್ದೇನೆ. ಹಿಂದೂ ಸಾಂಪ್ರದಾಯದಂತೆ ವಾದಿಗೆ ಮಾಂಗಲ್ಯ ಧಾರಣೆಯನ್ನು ಪ್ರಸನ್ನಕುಮಾರ್ ರವರು ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು ಪ್ರಸನ್ನಕುಮಾರ್ ರವರು ಚಿಕ್ಕಯ್ಯನವರ ಮನೆಯಲ್ಲಿ ಸಂಸಾರ ಪ್ರಾರಂಭ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ದಾಂಪತ್ಯ ಜೀವನದಿಂದ 2 ನೇ ವಾದಿ ಜನಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**